ಕರ್ನಾಟಕ ವಿಧಾನ ಪರಿಷತ್ತು

ಚು.ಗು. ರಹಿತ ಪ್ರಶ್ನೆ ಸಂಖ್ಯೆ : 1039

ಸದಸ್ಯರ ಹೆಸರು : ಶ್ರೀ ಎಸ್. ರವಿಕುಮಾರ್
(ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ಸಚಿವರು : ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸಬೇಕಾದ ದಿನಾಂಕ : 25-02 2022

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	278ಕ್ಕೂ ಹೆಚ್ಚು ಐಷಾರಾಮಿ ಕಾರುಗಳಿಗೆ ತೆರಿಗೆಯನ್ನು, R.T.O. ಕಛೇರಿಯ ಅಧಿಕಾರಿಗಳು ಸರ್ಕಾರಕ್ಕೆ ವಂಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ.	ಕೋರಮಂಗಲ R.T.O. ಕಛೇರಿ ಯಲ್ಲಿ ತೆರಿಗೆ ವಂಚನೆ ಮಾಡಿ ನೋಂದಣಿ ಮಾಡಿಕೊಳ್ಳಲಾದ ಕಾರುಗಳ ಕಡತಗಳೇ ಕಣ್ಮರೆಯಾಗಲು ಕಾರಣರಾದ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮಗಳೇನು? ಈ ಸಂಬಂಧ ಎಷ್ಟು ಅಧಿಕಾರಿಗಳನ್ನು ಅಮಾನತುಗೊಳಿಸಲಾಗಿದೆ?	ಕೋರಮಂಗಲ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ತೆರಿಗೆ ವಂಚನೆ ಮಾಡಿ ನೋಂದಣಿಯಾದ ಕಾರುಗಳ ಕೆಲವೊಂದು ಕಡತಗಳು ಕಣ್ಮರೆಯಾಗಿರುವುದು ಗಮನಕ್ಕೆ ಬಂದಿದ್ದು, ಪ್ರಕರಣದ ವಿಚಾರಣೆಗಾಗಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ನೇತೃತ್ವದಲ್ಲಿ ಅಧಿಕಾರಿ/ಸಿಬ್ಬಂದಿಗಳ ತಂಡವನ್ನು ರಚಿಸಿ ವಿಚಾರಣೆಯನ್ನು ಕೈಗೊಂಡಿದ್ದು, ವಿಚಾರಣೆಯ ಪ್ರಾಥಮಿಕ ವರದಿ ಸಲ್ಲಿಸಿದ್ದು, ಅದರಂತೆ ಒಟ್ಟು 236 ವಾಹನಗಳು ತೆರಿಗೆ ಪಾವತಿಸದೆ ನೋಂದಣಿಯಾಗಿರುವುದಾಗಿ ವರದಿ ಸಲ್ಲಿಕೆಯಾಗಿರುತ್ತದೆ ಹಾಗೂ ತೆರಿಗೆ ಪಾವತಿಸದೆ ನೋಂದಣಿಯಾದ ಎಲ್ಲಾ 236 ವಾಹನಗಳ ಕಡತಗಳು ಕಾಣೆಯಾಗಿರುವುದಾಗಿ ವರದಿಯಲ್ಲಿ ತಿಳಿಸಲಾಗಿರುತ್ತದೆ. ಕಡತಗಳು ಕಾಣೆಯಾಗಿರುವುದರಿಂದ ತೆರಿಗೆ ಪಾವತಿಸದೆ ನೋಂದಣಿಯಾದ ವಾಹನಗಳಿಂದ ಬರಬೇಕಾದ ತೆರಿಗೆ ಮೊತ್ತದ ಪ್ರಮಾಣವು ನಿಖರವಾಗಿ ತಿಳಿದುಬರುತ್ತಿಲ್ಲ. ಆದಾಗ್ಯೂ, ತೆರಿಗೆ ವಂಚನೆ ಮಾಡಿ ನೋಂದಣಿಯಾದ ವಾಹನ ಗಳಿಂದ ಸಂದಾಯವಾಗಬೇಕಾಗಿರುವ ತೆರಿಗೆ ವಸೂಲಿಗಾಗಿ ಎಲ್ಲಾ ವಾಹನಗಳ ಮಾಲೀಕರಿಗೆ ನೋಟೀಸನ್ನು ಜಾರಿ ಮಾಡಲಾಗಿದ್ದು ಇಲ್ಲಿಯ ವರೆಗೆ 12 ವಾಹನಗಳಿಂದ ರೂ.1,53,83,941/- ತೆರಿಗೆ ಮೊತ್ತವನ್ನು ವಸೂಲು ಮಾಡಲಾಗಿರುತ್ತದೆ. ಇನ್ನುಳಿದ ವಾಹನಗಳ ತೆರಿಗೆ ವಸೂಲು ಮಾಡಲು ಮೋಟಾರು ವಾಹನ ನಿರೀಕ್ಷಕರ 29 ತಂಡಗಳನ್ನು ರಚಿಸಿದ್ದು ವಾಹನಗಳನ್ನು ಜಪ್ತು ಮಾಡಿ ತೆರಿಗೆ ವಸೂಲಿ ಮಾಡಲು

		ಆದೇಶಿಸಲಾಗಿರುತ್ತದೆ ಕಡತಗಳು ಕಣ್ಮರೆಯಾಗಲು ಕಾರಣರಾದ ಅಧಿಕಾರಿ ಹಾಗೂ ಸಿಬ್ಬಂಧಿಗಳ ಕುರಿತು ವಿಚಾರಣೆಯನ್ನು ಕೈಗೊಳ್ಳಲಾಗುತ್ತಿದ್ದು, ವಿಚಾರಣಾ ವರದಿ ಪರಿಶೀಲಿಸಿದ ನಂತರ ಕ್ರಮ ಕೈಗೊಳ್ಳ ಲಾಗುವುದು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲ್ಲಿಯವರೆಗೂ ಯಾವುದೇ ಅಧಿಕಾರಿ, ಸಿಬ್ಬಂದಿಗಳನ್ನು ಅಮಾನತ್ತು ಮಾಡಿರುವುದಿಲ್ಲ. ಈ ಕುರಿತು ಶೀಘ್ರವೇ ಕ್ರಮ ಕೈಗೊಳ್ಳ ಲಾಗುವುದು.
ಇ	ಸರ್ಕಾರದ ತೆರಿಗೆ ನಷ್ಟವನ್ನು ವಸೂಲು ಮಾಡಲು ಕೈಗೊಂಡ ಕ್ರಮಗಳೇನು? ಯಾವ ಅಧಿಕಾರಿಯಿಂದ ಎಷ್ಟು ಮೊತ್ತವನ್ನು ವಸೂಲು ಮಾಡಲಾಗಿದೆ?	ತೆರಿಗೆ ಪಾವತಿಸದೆ ನೋಂದಣಿಯಾದ ಕಾರುಗಳನ್ನು ಜಪ್ತಿ ಮಾಡಿಕೊಂಡು ತೆರಿಗೆ ವಸೂಲು ಮಾಡುವುದಕ್ಕಾಗಿ ವಾಹನ ಮಾಲೀಕರುಗಳಿಗೆ ನೋಟೀಸ್ ಗಳನ್ನು ಜಾರಿ ಮಾಡಿದ್ದು ಮತ್ತು 29 ಮೋಟಾರು ವಾಹನ ತನಿಖಾಧಿಕಾರಿಗಳಿಗೆ ತೆರಿಗೆ ವಸೂಲು ಮಾಡುವ ಜವಾಬ್ದಾರಿ ನೀಡಲಾಗಿರುತ್ತದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣಾ ತಂಡವು ಪ್ರಾಥಮಿಕ ವರದಿ ಸಲ್ಲಿಸಿದ್ದು, ತೆರಿಗೆ ಪಾವತಿಸದೆ ನೋಂದಣಿ ಆಗಿರುವ ವಾಹನಗಳ ಸಂಪೂರ್ಣ ಮಾಹಿತಿ ಹಾಗೂ ಈ ಕೃತ್ಯದಲ್ಲಿ ಶಾಮೀಲಾಗಿರುವ ಅಧಿಕಾರಿ, ಸಿಬ್ಬಂದಿಗಳ ಹಾಗೂ ಇನ್ನಿತರೆ ವ್ಯಕ್ತಿಗಳ ಮಾಹಿತಿಯನ್ನು ಪತ್ತೆಹಚ್ಚಿ ವರದಿ ಮಾಡಲು ಆದೇಶ ಮಾಡಲಾಗಿರುತ್ತದೆ. ಪರಿಶೀಲನಾ ತಂಡವು ಈಗಾಗಲೇ ತನ್ನ ಕಾರ್ಯವನ್ನು ಪ್ರಾರಂಭಿಸಿರುತ್ತದೆ. ಪರಿಶೀಲನೆ ತನಿಖೆ ಪೂರ್ಣಗೊಂಡ ನಂತರ ಪ್ರಕರಣದ ಉನ್ನತ ಮಟ್ಟದ ತನಿಖೆಯನ್ನು ಕೈಗೊಳ್ಳುವ ಕುರಿತು ಕ್ರಮವಹಿಸಲಾಗುವುದು.

ದಿನಾಂಕ 20 ಫೆಬ್ರವರಿ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ
ಪಂಗಡಗಳ ಕಲ್ಯಾಣ ಸಚಿವರು